ಮೈಸೂರು ವಿಧಾನಸಭೆ
MYSORE LEGISLATIVE ASSEMBLY

Friday, 23rd June 1972/Ashada 2, 1894 S. E.

The House met in the Assembly Chamber, Vidhana Soudha, at One of the Clock.

MADAM SPEAKER (SMT. K. S. NAGARATHNAMMA) in the Chair.

STARRED QUESTIONS

(to which oral answers were given)

Schools in Mudigere Constituency

24. Sri G. PUTTASWAMY (Mudigere).—

Will the Minister for Education be pleased to state :—

(*a*) the names of villages in Mudigere Constituency where there are no schools and whether the Government have prepared a list of villages where the schools are essential ;

(*b*) if such a list is prepared whether it would be placed on the Table of the House ;

(*c*) if not, whether the Government would take steps to prepar such list and place it on the Table of the House ;

(*d*) whether it has come to the notice of the Government that there is no school in Anajoor Village of Mudigere Constituency ?

Sri A. R. BADARINARAYANA (Minister for Education).—

(*a*) A list of such villages not having schools is prepared and published in Mysore Gazette every year as enjoined by Compulsory Education Act.

(*b*) If found necessary the list so published will be placed on the Table of the House.

(*c*) Does not arise.

(*d*) Yes. It has come to the notice of the Government.

ಶ್ರೀ ಜಿ. ಪುಟ್ಟಸ್ವಾಮಿ. —ಪ್ರತಿವರ್ಷವೂ ಶಾಲೆಗಳಿಲ್ಲದ ಗ್ರಾಮಗಳ ಪಟ್ಟಿಯನ್ನು ಗೆಜೆಟ್ಟಿನಲ್ಲಿ ಪ್ರಕಟಿಸಲಾಗುವುದು ಎಂದು ಉತ್ತರದಲ್ಲಿ ತಿಳಿಸಿದೆ. ಅದರ ಪ್ರಕಾರ ಯಾವ ಯಾವ ಗ್ರಾಮಗಳಲ್ಲಿ ಶಾಲೆಗಳಿಲ್ಲವೆಂಬುದನ್ನು ತಿಳಿಸುವಿರಾ ?

† ಶ್ರೀ ಎ. ಆರ್. ಬದರಿನಾರಾಯಣ್.—ಅನಜೂರ ಗ್ರಾಮವೊಂದೇ ಶಾಲೆ ಇಲ್ಲದಿರುವ ಗ್ರಾಮ.

ಶ್ರೀ ಜಿ. ಪುಟ್ಟಸ್ವಾಮಿ.—ಬೇರೆ ಯಾವುದಾದರೂ ಇದೆಯೇ ?

ಶ್ರೀ ಎ. ಆರ್. ಬದರಿನಾರಾಯಣ್.—ಈ ವರ್ಷ ಯಾವುದೂ ಇಲ್ಲ.

ಶ್ರೀ ಜಿ. ಪುಟ್ಟಸ್ವಾಮಿ.—ಅನಜೂರ ಗ್ರಾಮಕ್ಕೆ ಶಾಲೆಯನ್ನೇಕೆ ಕೊಟ್ಟಿಲ್ಲ ?

ಶ್ರೀ ಎ. ಆರ್. ಬದರಿನಾರಾಯಣ್.—ಈ ವರ್ಷದ ಲಿಸ್ಟಿನಲ್ಲಿ ಅದು ಇದೆ. ಶಾಲೆಯನ್ನು ಕೊಡಬೇಕಾದರೆ 30 ಕ್ಕಿಂತ ಕಡಮೆ ವಿದ್ಯಾರ್ಥಿಗಳಿರಬಾರದು ಎಂದು ನಿಯಮವಿದೆ. ಆದರಂತೆ ಅಲ್ಲಿ 30 ವಿದ್ಯಾರ್ಥಿಗಳಿದ್ದರೆ, ಶಾಲೆ ಅಲ್ಲಿಗೆ ಕೊಡಲಾಗುವುದು.

ಶ್ರೀ ಜಿ. ಪುಟ್ಟಸ್ವಾಮಿ.—ಅಲ್ಲಿ ಸುಮಾರು 40 ಮಕ್ಕಳಿಗಿಂತ ಜಾಸ್ತಿ ಹುಡುಗರು ಶಾಲೆಗೆ ಬರಲಿರುವವರು ಇದ್ದಾರೆಂಬುದು ಗಮನಕ್ಕೆ ಬಂದಿದೆಯೇ ?

ಶ್ರೀ ಎ. ಆರ್. ಬದರಿನಾರಾಯಣ್.—40 ವಿದ್ಯಾರ್ಥಿಗಳಿದ್ದರೆ ಶಾಲೆ ಕೊಡಲಾಗುವುದು.

ಶ್ರೀ ಕೋಣಂದೂರು ಲಿಂಗಪ್ಪ.—ಮಲೆನಾಡಿನಲ್ಲಿ ಒಂದೇ ಕಡೆ 30 ಹುಡುಗರು ದೊರೆಯುವುದು ಕಷ್ಟ. ಆದುದರಿಂದ ಅಲ್ಲಿನ ವಾತಾವರಣಕ್ಕನುಗುಣವಾಗಿ ಕಾನೂನನ್ನು ಮಾಡುವಿರಾ ?

ಶ್ರೀ ಎ. ಆರ್. ಬದರಿನಾರಾಯಣ್.—ಅದು ಗಮನಿಸತಕ್ಕ ವಿಷಯ.

Sri C. M. ARUMUGHAM.—What is the number of villages that require schools according to the latest Gazette Notificaton ?

ಶ್ರೀ ಎ. ಆರ್. ಬದರಿನಾರಾಯಣ್.—ಈಗ ಮೂಡಿಗೆರೆ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಪ್ರಶ್ನೆ ಇದೆ. ಆದುದರಿಂದ ಅದಕ್ಕೆ ಮಾತ್ರ ಉತ್ತರ ಕೊಡಲಾಗಿದೆ. ಇಡೀ ದೇಶದ ವಿಚಾರ ಬೇಕಾದರೆ ಅದಕ್ಕೆ ಬೇರೆ ಪ್ರಶ್ನೆ ಹಾಕಿದರೆ ವಿಚಾರ ತಿಳಿಸಬಹುದು.

Sri H. S. SIDDAPPA.—The Government is giving only schools but not teachers to those schools.

ಶ್ರೀ ಎ. ಆರ್. ಬದರಿನಾರಾಯಣ್.—ಶಾಲೆಗಳನ್ನು ತೆರೆದಮೇಲೆ ಅದಕ್ಕೆ ಬೇಕಾದ ಉಪಾಧ್ಯಾಯರನ್ನು ನೇಮಕಮಾಡುವರು. ಒಂದುವೇಳೆ ಕಾರಣಾಂತರದಿಂದ ನೇಮಕ ಮಾಡುವುದು ಎಲ್ಲಾದರೂ ನಿಧಾನವಾಗಿದ್ದರೆ ಆದಷ್ಟು ಬೇಗ ನೇಮಕಮಾಡಲಾಗುವುದು.

ಶ್ರೀ ಟಿ. ಎಂ. ಮಂಜುನಾಥ.—30 ಹುಡುಗರಿದ್ದರೆ ಒಬ್ಬರು ಉಪಾಧ್ಯಾಯರನ್ನು ಕೊಡುವುದಾಗಿ ಹೇಳಿದರು. ವಿದ್ಯಾರ್ಥಿಗಳ ಸಂಖ್ಯೆ ಜಾಸ್ತಿ ಇದ್ದರೆ ಉಪಾಧ್ಯಾಯರ ಸಂಖ್ಯೆಯನ್ನು ಹೆಚ್ಚಿಸುವಿರಾ ?

ಶ್ರೀ ಎ. ಆರ್. ಬದರಿನಾರಾಯಣ್.—ತತ್ವಶಃ 30 ಹುಡಗರಿದ್ದರೆ ಒಬ್ಬರು ಉಪಾಧ್ಯಾಯರನ್ನು ಕೊಡಬೇಕು. ಜಾಸ್ತಿ ಉಪಾಧ್ಯಾಯರನ್ನು ಮಂಜೂರುಮಾಡಲು ಹೆಚ್ಚು ಹಣ ಬೇಕು. ಆದುದರಿಂದ ಅವಶ್ಯ ಕಂಡರೂ ಹಣದ ಕೊರತೆಯಿಂದ ಒಂದೊಂದು ವೇಳೆ ಹೆಚ್ಚು ಉಪಾಧ್ಯಾಯರನ್ನು ನೇಮಕಮಾಡಲು ಸಾಧ್ಯವಾಗುವುದಿಲ್ಲ.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಹಿಂದೆ ಮಲೆನಾಡಿನಲ್ಲಿ 15 ವಿದ್ಯಾರ್ಥಿಗಳಿದ್ದರೂ ಶಾಲೆ ತೆರೆಯಬೇಕೆಂದು ರಿಯಾಯಿತಿ ತೋರಿಸಿದ್ದರು, ಈಚೆಗೆ ಅದನ್ನು ತೆಗೆದುಹಾಕಿದ್ದಾರೆ. ಯೂನಿಫಾರಂ ರೂಲ್ ಈಗ ಮಾಡಿರುತ್ತಾರೆ. ಆದರಂತೆ ಪ್ರೈಮರಿ ಶಾಲೆಗೆ 30 ಹುಡಗರು ಮತ್ತು ಹೈಸ್ಕೂಲಿಗೆ 45 ಹುಡುಗರು ಇರಬೇಕು. ಆದರೆ ಮಲೆನಾಡಿನಲ್ಲಿ ಇಷ್ಟು ಸಂಖ್ಯೆಯಲ್ಲಿ ಹುಡುಗರು ಬರಲು ಕಷ್ಟವಾಗುವುದರಿಂದ ಅಲ್ಲಿಗೆ ಮೊದಲಿದ್ದಂತೆ ರಿಯಾಯಿತಿ ತೋರಿಸುವಿರಾ ?

ಶ್ರೀ ಎ. ಆರ್. ಬದರಿನಾರಾಯಣ್.—ಅದು ಒಳ್ಳೆಯ ಸಲಹೆ, ಗಮನಿಸುತ್ತೇವೆ.

ಶ್ರೀ ಎಂ. ಮಲ್ಲಪ್ಪ.—ಶಾಲೆಗಳ ಅವಶ್ಯಕತೆ ಇರುವ ಗ್ರಾಮಗಳನ್ನು ಲಿಸ್ಟಿನಲ್ಲಿ ಸೇರಿಸುವಿರಾ ?

ಶ್ರೀ ಎ. ಆರ್. ಬದರಿನಾರಾಯಣ್.—ಅಗತ್ಯವಾಗಿ ಸೇರಿಸುತ್ತೇವೆ.

---

† indicates that the remarks or speeches have not been revised by the member concerned.